# ಪದ್ಯ ಭಾಗ

## 1. ಅನ್ವೇಷಣೆ

– ಜಿ.ಎಸ್.ಶಿವರುದಪ್ಪ

**ಕವಿ ಪರಿಚಯ :**

| | | |
|---|---|---|
| ಕವಿ | : | ಡಾ.ಜಿ.ಎಸ್.ಶಿವರುದ್ರಪ್ಪ |
| ಜನನ | : | 1926 |
| ಮರಣ | : | 2013 |
| ಸ್ಥಳ | : | ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕು ಈಸೂರು |
| ಕೃತಿಗಳು | : | ಸೌಂದರ್ಯ ಸಮೀಕ್ಷೆ, ದೀಪದ ಹೆಜ್ಜೆ, ಸಾಮಗಾನ ಕಾರ್ತಿಕ, ಅನಾವರಣ, ಗೋಡೆ, ತೆರೆದ ದಾರಿ, ಚೆಲುವು-ಒಲವು, ಕಾವ್ಯಾರ್ಥ ಚಿಂತನ |
| ಪ್ರಶಸ್ತಿಗಳು | : | ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿ, ನೃಪತುಂಗ ಪ್ರಶಸ್ತಿ, ರಾಷ್ಟ್ರಕವಿ ಪುರಸ್ಕಾರ |
| ವಿಶೇಷತೆ | : | 1992ರಲ್ಲಿ ದಾವಣಗೆರೆಯಲ್ಲಿ ನಡೆದ 71ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. |
| ಆಕರ | : | ಪ್ರಸ್ತುತ ಕವಿತೆಯನ್ನು 'ಗೋಡೆ' ಕವನ ಸಂಕಲನದಿಂದ ಆಯ್ಕೆ ಮಾಡಲಾಗಿದೆ. |

## ಅಭ್ಯಾಸ

I. ಪದಗಳ ಅರ್ಥ ತಿಳಿಯಿರಿ.

| | |
|---|---|
| ಅನ್ವೇಷಣೆ | – ಹುಡುಕು ; ಶೋಧಿಸು |
| ಕಲಕು | – ಕದಡು |
| ಗುರುತಿಸು | – ಗೊತ್ತು ಹಚ್ಚು |
| ಬಂಧನ | – ಸೆರೆ; ಕಟ್ಟು |
| ಅಹಂ | – ಗರ್ವ; ಪ್ರತಿಷ್ಠೆ |
| ಕೋಟೆ | – ಕಲ್ಲಿನ ರಕ್ಷಣಾ ಗೋಡೆ |
| ನಂದನ | – ಉದ್ಯಾನವನ |
| ಹೆಮ್ಮೆ | – ಅಭಿಮಾನ; ಹಿರಿಮೆ; ಸಂತೋಷ |

II. ಪ್ರಶ್ನೆಗಳು :

**ಅ. ಕೆಳಗೆ ನೀಡಿರುವ ಪದ್ಯದ ಸಾಲುಗಳನ್ನು ಪೂರ್ಣಗೊಳಿಸಿರಿ.**

1. ಎಲ್ಲೋ ಹುಡುಕಿದೆ ಇಲ್ಲದ ದೇವರ .................... ಗುಡಿಯೊಳಗೆ
2. ಒಳಗಿನ ತಿಳಿಯನು ಕಲಕದೆ ಇದ್ದರೆ .................... ನಾಲಗೆಗೆ
3. ಹತ್ತಿರವಿದ್ದೂ .................... ನಿಲ್ಲುವೆವು
4. ಎಷ್ಟು ಕಷ್ಟವೋ .................... ಎಂಬುದು ನಾಲ್ಕು ದಿನದ ಈ ಬದುಕಿನಲಿ.

**ಉತ್ತರಗಳು :** 1. ಕಲ್ಲು ಮಣ್ಣುಗಳ 2. ಅಮೃತದ ಸವಿಯಿದೆ 3. ದೂರ 4. ಹೊಂದಿಕೆ

ಆ. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.

1. ಕವಿ ಜಿ.ಎಸ್.ಶಿವರುದ್ರಪ್ಪನವರು ಮೊದಲು ದೇವರನ್ನು ಎಲ್ಲಿ ಹುಡುಕಿ ವಿಫಲರಾದರು?

ಉ. ಕವಿ ಜಿ.ಎಸ್.ಶಿವರುದ್ರಪ್ಪನವರು ಮೊದಲು ದೇವರನ್ನು ಕಲ್ಲು ಮಣ್ಣುಗಳ ಗುಡಿಯೊಳಗೆ ಹುಡುಕಿ ವಿಫಲರಾದರು.

2. ಕವಿ ಜಿ.ಎಸ್.ಎಸ್ ಅವರು ನಿಜವಾದ ದೇವರನ್ನು ಕಂಡದ್ದು ಎಲ್ಲಿ? ಯಾವ ರೂಪದಲ್ಲಿ?

ಉ. ಕವಿ ಜಿ.ಎಸ್.ಎಸ್ ಅವರು ನಿಜವಾದ ದೇವರನ್ನು ಕಂಡದ್ದು ನಮ್ಮೊಳಗೆ. ಅದು ಪ್ರೀತಿ ಸ್ನೇಹಗಳ ರೂಪದಲ್ಲಿ.

3. ನಂದನ ಮತ್ತು ಬಂಧನ ಎಂದರೇನು? ಅವು ಎಲ್ಲಿವೆ?

ಉ. ನಂದನವೆಂದರೆ ನಮ್ಮ ಸುಖ, ಸಂತೋಷ, ನೆಮ್ಮದಿಗಳು ಬಂಧನವೆಂದರೆ ನಮ್ಮ ದುಃಖ, ಕಷ್ಟ, ನಿರಾಸೆಗಳು ಅವು ನಮ್ಮೊಳಗೇ ಇವೆ.

4. ಅಮೃತದ ಸವಿ ನಮಗೆ ಯಾವಾಗ ಸಿಗುತ್ತದೆ?

ಉ. ನಮ್ಮೊಳಗಿನ ತಿಳಿಯನ್ನು (ಕೆಟ್ಟತನ) ಕಲಕದೇ ಇದ್ದರೆ ಅಮೃತದ ಸವಿ ಸಿಗುತ್ತದೆ.

5. ಮಾನವನಲ್ಲಿ ಅಹಂ ತುಂಬಿದಾಗ ಹೇಗೆ ವರ್ತಿಸುತ್ತಾನೆ?

ಉ. ಮಾನವನಲ್ಲಿ ಅಹಂ ತುಂಬಿದಾಗ ಎಲ್ಲರ ಜೊತೆಯಿದ್ದು ದೂರ ನಿಲ್ಲುತ್ತಾನೆ.

6. ನಾಲ್ಕು ದಿನದ ಬದುಕಿನಲ್ಲಿ ಯಾವುದು ಕಷ್ಟವಾಗಿದೆ?

ಉ. ನಾಲ್ಕು ದಿನದ ಬದುಕಿನಲ್ಲಿ ಹೊಂದಾಣಿಕೆ ಎಂಬುದು ಕಷ್ಟವಾಗಿದೆ.

ಇ. ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.

1. ಕವಿ ಜಿ.ಎಸ್.ಎಸ್. ಅವರು ದೇವರನ್ನು ಅನ್ವೇಷಿಸಿದ ಬಗೆ ಹೇಗೆ?

ಉ. ಕವಿ ಜಿ.ಎಸ್.ಎಸ್. ಅವರು ಇಲ್ಲದ ದೇವರನ್ನು ಎಲ್ಲೋ ಹುಡುಕಿದೆ ಎಂದು ಹೇಳುತ್ತಾರೆ. ಕಲ್ಲು ಮಣ್ಣುಗಳಿಂದ ಕಟ್ಟಿದ ಗುಡಿಯಲ್ಲಿ ಆ ದೇವರನ್ನು ತಾನು ಹುಡುಕಿದೆ. ಆದರೆ ದೇವರು ಅಲ್ಲಿ ಇಲ್ಲ. ಪ್ರೀತಿ ಸ್ನೇಹಗಳಿಂದ ಕೂಡಿದ ಮನುಷ್ಯ ಸಂಬಂಧಗಳನ್ನು ನಾವು ಗುರುತಿಸಲಿಲ್ಲವೆಂದು ಅವರು ಹೇಳಿದ್ದಾರೆ.

2. ಕವಿ ಹೇಳುವಂತೆ ಬದುಕಿನಲ್ಲಿ ಯಾವುದು ಕಷ್ಟ? ಅದನ್ನು ಪಡೆಯುವುದು ಹೇಗೆ?

ಉ. ಕವಿ ಹೇಳುವಂತೆ ಬದುಕಿನಲ್ಲಿ ಹೊಂದಿಕೆ ಎಂಬುದು ಬಹುಕಷ್ಟ. ನಾವೆಲ್ಲರೂ ಅಹಂಕಾರದ ಕೋಟೆಯನ್ನು ಕಟ್ಟಿಕೊಂಡಿದ್ದೇವೆ. ನಾವೇ ಸರಿ ಎಂದು ಭಾವಿಸುತ್ತೇವೆ. ಇದರಿಂದ ಎಲ್ಲರ ನಡುವೆ ಇದ್ದೂ ದೂರವಾಗಿದ್ದೇವೆ. ನಾಲ್ಕು ದಿನದ ಬಾಳಿನಲ್ಲಿ ಪರಸ್ಪರ ಹೊಂದಾಣಿಕೆ ಹಾಗೂ ಸ್ನೇಹ-ಸೌಹಾರ್ದಗಳಿಂದ ಬದುಕಬೇಕು.

ಈ. ಸಂದರ್ಭದೊಡನೆ ವಿವರಿಸಿ.

1. "ಪ್ರೀತಿ-ಸ್ನೇಹಗಳ ಗುರುತಿಸದಾದೆವು ನಮ್ಮೊಳಗೆ"

ಉ. ಆಯ್ಕೆ : ಈ ಸಾಲನ್ನು ಜಿ.ಎಸ್.ಶಿವರುದ್ರಪ್ಪ ನವರ 'ಗೋಡೆ' ಕವನ ಸಂಕಲನದ 'ಅನ್ವೇಷಣೆ' ಎಂಬ ಪದ್ಯದಿಂದ ಆರಿಸಲಾಗಿದೆ.

ಸಂದರ್ಭ : ಕವಿ ಈ ಮಾತನ್ನು ಹೇಳುತ್ತಾರೆ. ನಾವು ನಮ್ಮ ಕಷ್ಟಗಳ ಪರಿಹಾರಕ್ಕೆ ದೇವರನ್ನು ಗುಡಿ ಮಸೀದಿ, ಚರ್ಚುಗಳಲ್ಲಿ ಹುಡುಕುತ್ತೇವೆ. ದೇವರು ಎಂಬುದು ಅಲ್ಲಿಲ್ಲ. ಅದು ಮನುಷ್ಯರ ಪ್ರೀತಿ ಸ್ನೇಹ ಬಾಂಧವ್ಯಗಳಲ್ಲಿದೆ. ಅದನ್ನು ನಾವು ಗುರುತಿಸುವುದೇ ಇಲ್ಲ ಎಂದು ಕವಿ ಹೇಳಿದ್ದಾರೆ.

ಸ್ವಾರಸ್ಯ : ಮನುಷ್ಯರಲ್ಲಿ ಪ್ರೀತಿ-ಸ್ನೇಹಗಳಿರಬೇಕು ಎಂಬುದು ಈ ಮಾತಿನ ಸ್ವಾರಸ್ಯ

**2. ಅಮೃತದ ಸವಿಯಿದೆ ನಾಲಗೆಗೆ.**

ಉ. **ಆಯ್ಕೆ :** ಈ ಸಾಲನ್ನು ಜಿ.ಎಸ್.ಶಿವರುದ್ರಪ್ಪ ನವರ 'ಗೋಡೆ' ಕವನ ಸಂಕಲನದ 'ಅನ್ವೇಷಣೆ' ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ :** ಈ ಮಾತನ್ನು ಕವಿ ಹೇಳಿದ್ದಾರೆ. ನಮ್ಮೊಳಗಿರುವ ಕೆಟ್ಟ ಭಾವನೆಗಳನ್ನು ಹೊರಹಾಕದೇ ಒಳ್ಳೆಯತನದಿಂದ ಬಾಳಿದರೆ ಅದೇ ಅಮೃತದ ಸವಿಯಂತೆ ಇರುತ್ತದೆ. ನಂದನ-ಬಂಧನಗಳೆಲ್ಲವೂ ನಮ್ಮಲ್ಲೇ ಇದೆ ಅವುಗಳಿಗೆ ಕಾರಣ ನಾವೇ ಎಂದು ಕವಿ ಹೇಳಿದ್ದಾರೆ.

**ಸ್ವಾರಸ್ಯ :** ನಮ್ಮೊಳಗಿನ ಕೆಟ್ಟತನವನ್ನು ಕಲಕಿ ಬೇರೆಯವರಲ್ಲೂ ಹಾಳಾಗಬಾರದು ಎಂಬುದು ಇದರ ಆಶಯ.

ಸ್ವಾರಸ್ಯ

ಊ. ಬಿಟ್ಟ ಸ್ಥಳಗಳನ್ನು ನೀಡಿರುವ ನಾಲ್ಕು ಆಯ್ಕೆಯ ಉತ್ತರಗಳಿಂದ ಸರಿಯಾದುದ
ಆಯ್ದು ಬರೆಯಿರಿ.

1. ಕವಿ ಜಿ.ಎಸ್.ಎಸ್. ಅವರು ದೇವರನ್ನು ಪ್ರೀತಿ–ಸ್ನೇಹ ರೂಪದಲ್ಲಿ ಕಂಡರು.

ಅ. ಗುಡಿ ಆ. ಕಲ್ಲು ಮಣ್ಣು ಇ. ಪ್ರೀತಿ ಸ್ನೇಹ ಈ. ಕೋಟೆ

2. ಬದುಕಿನಲ್ಲಿ ಹೊಂದಾಣಿಕೆ ಎಂಬುದು ಕಷ್ಟ ಎಂದು ಕವಿ ಹೇಳುತ್ತಾರೆ.

ಅ. ಹೊಂದಾಣಿಕೆ ಆ. ಅಹಂ ಇ. ಹಿರಿಮೆ ಈ. ಮೋಹ

3. ನಮ್ಮೊಳಗಿನ ತಿಳಿಯನು ಕಲಕದೆ ಇದ್ದರೆ ನಾಲಗೆಗೆ ಅಮೃತ ಇದೆ.

ಅ. ಹುಳಿ ಆ. ವಿಷ ಇ. ಒಗರು ಈ. ಅಮೃತ

4. ಅಹಂ ಇರುವ ವ್ಯಕ್ತಿ ಜನರಿಗೆ ದೂರ ಆಗುತ್ತಾನೆ.

ಅ. ಉಪಕಾರಿ ಆ. ಹತ್ತಿರ ಇ. ದೂರ ಈ. ಒಳ್ಳೆಯವನು

III. ಭಾಷಾಭ್ಯಾಸ

ಅ. ಕೆಳಗಿನ ಪದಗಳಿಗೆ ಸಮಾನಾರ್ಥಕಗಳನ್ನು ಬರೆಯಿರಿ.

ಗುಡಿ = ದೇವಾಲಯ, ಮಂದಿರ

ಹತ್ತಿರ = ಸಮೀಪ, ಪಕ್ಕ

ಬಂಧನ = ಸೆರೆ, ಕಟ್ಟು

ಸ್ನೇಹ = ಪ್ರೀತಿ, ಗೆಳೆತನ

ಆ. ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಬರೆಯಿರಿ.

ಪ್ರೀತಿ × ದ್ವೇಷ

ದೂರ × ಸಮೀಪ

ಅಮೃತ × ವಿಷ

ಸಿಹಿ × ಕಹಿ

ಕಷ್ಟ × ಸುಖ

ಬಂಧನ × ಬಿಡುಗಡೆ

ಬಂಧ × ಮುಕ್ತ

ಇ. ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ.

1. ದೇವರು : ಕಷ್ಟಕಾಲದಲ್ಲಿ ದೇವರು ಕಾಪಾಡುತ್ತಾನೆ ಎಂಬುದು ಜನರ ನಂಬಿಕೆ.
2. ಪ್ರೀತಿಸ್ನೇಹ : ಮನುಷ್ಯರೆಲ್ಲರೂ ಪರಸ್ಪರ ಪ್ರೀತಿಸ್ನೇಹಗಳಿಂದ ಬಾಳಬೇಕು.
3. ಬಂಧನ : ನಮ್ಮ ಬದುಕೇ ನಮಗೆ ಬಂಧನವಾಗಬಾರದು.
4. ಅಮೃತ : ಅಮೃತವು ದೇವತೆಗಳು ಕುಡಿಯುವ ಪೇಯವೆಂಬ ಭಾವನೆಯಿದೆ.
5. ಹೊಂದಿಕೆ : ವಿದ್ಯಾರ್ಥಿಗಳಾದ ನಮ್ಮ ಹೊಂದಿಕೆಯ ಸ್ವಭಾವವಿರಬೇಕು.
6. ಅಹಂ : ನಮಗೆ ಅಹಂ ಭಾವನೆ ಇರಬಾರದು.

ಈ. ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.

ಹತ್ತಿರವಿದ್ದು = ಹತ್ತಿರ + ಇದ್ದು

ಗುಡಿಯೊಳಗೆ = ಗುಡಿಯ + ಒಳಗೆ

ಸವಿಯಿದೆ = ಸವಿ + ಇದೆ

ಕಷ್ಟವೋ = ಕಷ್ಟ + ಓ

ಉ. ಸುಳಿವು ಪದಗಳನ್ನು ಬಳಸಿ ಜೋಡಿ ಪದಗಳನ್ನು ಬರೆಯಿರಿ.

| | |
|---|---|
| ಕಲ್ಲು - ಮಣ್ಣು, | ಪ್ರೀತಿ - ಸ್ನೇಹ |
| ಹೊಲ- ಗದ್ದೆ | ಹೂವ - ಹಣ್ಣು |
| ಗಿಡ - ಮರ | ಕಳ್ಳ - ಸುಳ್ಳ |
| ಗುಡ್ಡ - ಬೆಟ್ಟ | ಮಳೆ - ಬೆಳೆ |
| ಎಡ - ಬಲ | ರೀತಿ - ನೀತಿ |

(ಸುಳಿವು : ಮರ, ಹಣ್ಣು, ನೀತಿ, ಬೆಟ್ಟ, ಗದ್ದೆ, ಬೆಳೆ, ಸುಳ್ಳ, ಬಲ)

**ಈ ಪದ್ಯವನ್ನು ಕಂಠಪಾಠ ಮಾಡಿರಿ.**

ಎಲ್ಲೋ ಹುಡುಕಿದೆ ಇಲ್ಲದ ದೇವರ
ಕಲ್ಲು ಮಣ್ಣುಗಳ ಗುಡಿಯೊಳಗೆ
ಇಲ್ಲೇ ಇರುವ ಪ್ರೀತಿ ಸ್ನೇಹಗಳ
ಗುರುತಿಸದಾದೆವು ನಮ್ಮೊಳಗೆ ॥

ಎಲ್ಲಿದೆ ನಂದನ? ಎಲ್ಲಿದೆ ಬಂಧನ?
ಎಲ್ಲಾ ಇವೆ ಈ ನಮ್ಮೊಳಗೆ
ಒಳಗಿನ ತಿಳಿಯನು ಕಲಕದೆ ಇದ್ದರೆ
ಅಮೃತದ ಸವಿಯಿದೆ ನಾಲಗೆಗೆ ॥

ಹತ್ತಿರವಿದ್ದೂ, ದೂರ ನಿಲ್ಲುವೆವು
ನಮ್ಮ ಅಹಮ್ಮಿನ ಕೋಟೆಯಲಿ
ಎಷ್ಟು ಕಷ್ಟವೋ ಹೊಂದಿಕೆ ಎಂಬುದು
ನಾಲ್ಕು ದಿನದ ಈ ಬದುಕಿನಲಿ ॥